

ಇಳಕಲ್‌ನಲ್ಲಿ ನಡೆದ ಗೋಕಾಕ್ ಚಳವಳಿ ಬಹಿರಂಗ ಸಭೆಯಲ್ಲಿ ರಾಜಕುಮಾರ್ ಹಾಗೂ ಬಾಲಕ ಪುನೀತ್

ಪ್ರಸ್ತುತ ಭಾರತದ ಭಾಷಾ ಸಮುದಾಯಗಳು 'ನುಡಿ ಸಮಾನತೆ'ಗಾಗಿ ಒಗ್ಗೂಡಿ ದನಿಯೆತ್ತುವಂತಹ ಬೆಳವಣಿಗೆ ಆರಂಭವಾಗಿದೆ.

'ಕನ್ನಡ ಚಳವಳಿಯಲ್ಲಿ ತೊಡಗುವುದು ಹೇಗೆ?' ಕನ್ನಡದಲ್ಲಿ ಗ್ರಾಹಕಸೇವೆಯನ್ನು ಒತ್ತಾಯಿಸುವ ಮೂಲಕ, ವಲಸಿಗರೊಂದಿಗೆ ಕನ್ನಡದಲ್ಲೇ ಮಾತಾಡುವ ಮೂಲಕ, ಕನ್ನಡದ ಶಾಲೆಗಳ ಉಳಿವಿಗೆ ನೆರವಾಗುವ ಮೂಲಕ, ಕನ್ನಡದ ಉದ್ದಿಮೆಗಳನ್ನು ಪೋಷಿಸುವ ಮೂಲಕ, ಕನ್ನಡಿಗರಿಗೆ ಉದ್ಯೋಗಾವಕಾಶ ಒದಗಿಸುವ ಮೂಲಕ ಕನ್ನಡ ಚಳವಳಿಯ ಭಾಗವಾಗಬಹುದಾಗಿದೆ.

ತನ್ನ ತಾಯ್ನುಡಿಯ ಮೂಲಕವೇ ಆಗಬೇಕೆಂಬುದನ್ನು ಇಂದಿನ ಹೊಸಕನ್ನಡ ತಲೆಮಾರು ಅರಿತಿದೆ. ಜಗತ್ತಿನ ಮುಂದುವರೆದ ದೇಶಗಳಾದ ಜಪಾನ್, ಜರ್ಮನಿ, ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ಎಲ್ಲಾ ದೇಶಗಳೂ ತಾಯ್ನುಡಿಯ ಸುತ್ತಲೇ ಕಟ್ಟಿಕೊಂಡಿರುವ ದೇಶಗಳಾಗಿವೆ. ಮಾನವ ಅಭಿವೃದ್ಧಿ ಸೂಚ್ಯಂಕವು 0.80ಕ್ಕಿಂತ ಹೆಚ್ಚಾಗಿದ್ದರೆ ಅಂತಹ ನಾಡುಗಳನ್ನು ಅಭಿವೃದ್ಧಿ ಹೊಂದಿವೆ ಎನ್ನುತ್ತಾರೆ. ಇಂದು ಜಗತ್ತಿನಲ್ಲಿ 37 ದೇಶಗಳು ಮುಂದುವರೆದಿವೆ. ಅವುಗಳಲ್ಲಿ ಶೇ. 90 ನಾಡುಗಳು ತಾಯ್ನುಡಿಯ ಸುತ್ತ ಕಟ್ಟಿಕೊಂಡ ನಾಡುಗಳು. ಕನ್ನಡನಾಡಿನ ಮಾನವ ಅಭಿವೃದ್ಧಿ ಸೂಚ್ಯಂಕವು ಇಂದು 0.701 ಇದೆ. ತಾಯ್ನುಡಿಯ ಸುತ್ತ ನಮ್ಮ ನಾಡನ್ನು ಕಟ್ಟಿಕೊಂಡರೆ ಈ ಗುರಿಯನ್ನು ನಾವೂ ಸಾಧಿಸಬಹುದು. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಸರಾಸರಿ ಆಯುಷ್ಯ, ಕಲಿಕೆಯ ಮಟ್ಟ ಮತ್ತು ತಲಾದಾಯಗಳಂತಹ ಅಂಶಗಳು ಇರುತ್ತವೆ. ಇವನ್ನೆಲ್ಲಾ ಹೆಚ್ಚಿಸಬೇಕೆಂದರೆ ನಾವೂ ಕನ್ನಡ ನಾಡನ್ನು ತಾಯ್ನುಡಿಯ ಸುತ್ತ ಕಟ್ಟಿಕೊಳ್ಳುವುದು ಅಗತ್ಯವಾಗಿದೆ ಎಂಬುದು ಇಂದಿನ ಯುವಸಮೂಹಕ್ಕೆ ಅರಿವಾಗುತ್ತಿದೆ.

## ಸಮಾನತೆಯ ಭಾಷಾನೀತಿಗಾಗಿ ಆಗ್ರಹ

ಕನ್ನಡಿಗರ ಮುಂದೆ ನಾಳೆಗಳನ್ನು ಕಟ್ಟಿಕೊಂಡು, ಸಾಧನೆಯ ಶಿಖರದತ್ತ ಸಾಗಬೇಕಾದ ಮಹತ್ವದ ಹೊಣೆಗಾರಿಕೆ ಇರುವಂತೆಯೇ, ಇಂದು ನಮ್ಮೆದುರು ಇರುವ ಅಡೆತಡೆಗಳನ್ನು ನಿವಾರಿಸಿಕೊಳ್ಳಬೇಕಾದ ಅನಿವಾರ್ಯತೆಯೂ ಇದೆ. ಸ್ವಾತಂತ್ರ್ಯಾನಂತರ ಭಾರತ ಸರ್ಕಾರವು ಅಳವಡಿಸಿಕೊಂಡಿರುವ ಭಾಷಾನೀತಿಯು ಕನ್ನಡ ಹಾಗೂ ಕನ್ನಡಿಗರ ಬದುಕಿನ ಮೇಲೆ ಬೀರಿರುವ ಪರಿಣಾಮಗಳ ಪರಾಮರ್ಶೆಯನ್ನು ಇಂದಿನ ಯುವ ಕನ್ನಡಿಗ ಮಾಡುತ್ತಿದ್ದಾನೆ.

ಭಾರತ ದೇಶದಲ್ಲಿ ತನ್ನದೇ ಆದ ಭಾಷೆ ರಾಷ್ಟ್ರಭಾಷೆ ಆಗಿ, ಅದು ವಸಾಹತುಶಾಹಿಗಳ ಇಂಗ್ಲಿಷನ್ನು ಬದಲಾಗಿ ಜಾರಿಯಾಗಿಬಿಟ್ಟರೆ, ಅದು ಭಾರತೀಯರನ್ನು ಒಗ್ಗೂಡಿಸುವ ಸಾಧನವಾಗುತ್ತದೆ ಎನ್ನುವ ಆಶಯ ಹಾಗೂ ನಂಬಿಕೆ ಮಹಾತ್ಮಗಾಂಧಿಯವರೂ ಸೇರಿದಂತೆ ಅಂದಿನ ಹಿರಿಯರಿಗೆಲ್ಲಾ ಇತ್ತು. ಆ ನಿಟ್ಟಿನಲ್ಲೇ ಸಂವಿಧಾನ ಭಾಗ 17ನ್ನು ರೂಪಿಸಿ, 343ರಿಂದ 351ನೇ ವಿಧಿಯವರೆಗೆ ಹಿಂದಿ ಭಾಷೆಗೆ ವಿಶೇಷ ಮನ್ನಣೆ ನೀಡಲಾಯಿತು. ಇಂದು 75 ವರ್ಷಗಳ ನಂತರ ಹಿಂದಿರುಗಿ ನೋಡಿದಾಗ ನಮ್ಮ ದೇಶ ಅಳವಡಿಸಿಕೊಂಡ ಭಾಷಾನೀತಿಯ ಹುಳುಕು ಎದ್ದು ಕಾಣುತ್ತದೆ. ಹಿಂದಿಯೇತರರನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿಸಿದ ಈ ನೀತಿ 'ಹಿಂದೀ ಭಾರತವನ್ನು ಒಗ್ಗೂಡಿಸುವ ಬದಲಾಗಿ ಒಡೆದು ಹಾಕುತ್ತದೆ' ಎನ್ನುವ ವಾಸ್ತವವನ್ನು ಮುಖಕ್ಕೆ ರಾಚುತ್ತದೆ.

ಹಿಂದೆಲ್ಲಾ ನಡೆದ ಹಿಂದಿ ವಿರೋಧಿ ಚಳವಳಿಗಳು 'ನಮ್ಮ ಮೇಲೆ ಹಿಂದಿ ಹೇರಿಕೆ ಮಾಡಬೇಡಿ, ಹಿಂದಿ ಬದಲಾಗಿ ಇಂಗ್ಲಿಷನ್ನು ಮುಂದುವರೆಸಿ' ಎಂಬ ತಳಹದಿಯನ್ನು ಹೊಂದಿದ್ದರೆ, ಇಂದು ಇದು 'ನುಡಿ ಸಮಾನತೆ' ಎನ್ನುವ ದೊಡ್ಡ ನೈತಿಕಮೌಲ್ಯವನ್ನು ಪ್ರತಿಪಾದಿಸುತ್ತಿದೆ. ಕನ್ನಡನೆಲದಲ್ಲಿ ಕನ್ನಡವೇ ಸಾರ್ವಭೌಮತ್ವ ಹೊಂದಿರಬೇಕು; ಇಲ್ಲಿರುವ ಸರ್ಕಾರಿ, ಖಾಸಗಿ, ಒಕ್ಕೂಟ ಸರ್ಕಾರದ ಅಧೀನ ಸಂಸ್ಥೆಗಳ ಸಹಿತ ಯಾವುದೇ ಸಂಸ್ಥೆಯಾದರೂ ಕನ್ನಡದಲ್ಲಿ ಕೆಲಸ ಮಾಡಬೇಕು. ಕರ್ನಾಟಕದಲ್ಲಿ ಕನ್ನಡಕ್ಕೆ, ತಮಿಳುನಾಡಿನಲ್ಲಿ ತಮಿಳಿಗೆ, ಹಿಂದಿ ನೆಲದಲ್ಲಿ ಹಿಂದಿಗೆ ಸಾರ್ವಭೌಮತ್ವ ದೊರೆಯಬೇಕು ಎನ್ನುವ ಉನ್ನತ ನೈತಿಕತೆಯ ನಿಲುವನ್ನು ಯುವ ಕನ್ನಡಿಗ ಅಳವಡಿಸಿಕೊಳ್ಳುತ್ತಿದ್ದಾನೆ. ಇದೇ ಕಾರಣದಿಂದಾಗಿ ಭಾರತದ ಒಳಿತು ಮತ್ತು ಉಳಿವಿಗಾಗಿ ಸಂವಿಧಾನದ 343–351ನೇ ವಿಧಿಗಳ ಬದಲಾವಣೆಯನ್ನು ಪ್ರತಿಪಾದಿಸುತ್ತಿದ್ದಾನೆ. ಇದು ಇಂದಿನ ಕನ್ನಡದ ಯುವ ಬೌದ್ಧಿಕ ವಲಯವು, ನಾಡಿನಾದ್ಯಂತ ವಿಶಾಲವಾದ ಭೌತಿಕ ನೆಲೆಗಟ್ಟನ್ನು ಹೊಂದಿರುವ ಕನ್ನಡಪರ ಸಂಘಟನೆಗಳಿಗೆ ನೀಡುತ್ತಿರುವ ತಾತ್ವಿಕ ನಿಲುವಾಗಿದೆ. ಹೀಗಾಗಿಯೇ ಇಂದಿನ ವರ್ತಮಾನದ ಕನ್ನಡಿಗರ ಹಿಂದಿ ಹೇರಿಕೆ ವಿರೋಧಿ ಹೋರಾಟವು ಭಾರತದ ಎಲ್ಲಾ ಭಾಷಿಕರನ್ನು ಸೆಳೆಯುತ್ತಿದೆ. ಎಲ್ಲರೂ ಕೂಡಿದರೆ ಮಾತ್ರ ಬದಲಾವಣೆ ಸಾಧ್ಯ ಎನ್ನುವುದನ್ನು ಮನವರಿಕೆ ಮಾಡಿರುವ ಇದು, ಭಾರತದ ಭಾಷಾ ಸಮುದಾಯಗಳು 'ನುಡಿ ಸಮಾನತೆ'ಗಾಗಿ ಒಗ್ಗೂಡಿ ದನಿಯೆತ್ತುವಂತಹ ಬೆಳವಣಿಗೆಗೆ ಕಾರಣವಾಗಿದೆ.

## ಕನ್ನಡಿಗರ ಉದ್ಯೋಗದ ಹಕ್ಕಿಗಾಗಿ ಧ್ವನಿ

ಕನ್ನಡನಾಡಿನ ಉದ್ಯೋಗಗಳಲ್ಲಿ ಉದ್ದೇಶಪೂರ್ವಕವಾಗಿ ಪರಭಾಷಿಕರನ್ನು ತುಂಬುವ ಹುನ್ನಾರಗಳನ್ನು ಗುರುತಿಸಿ ಎದುರಿಸುವ, ಕನ್ನಡದಲ್ಲಿ ಪರೀಕ್ಷೆಗಳನ್ನು ನಿರಾಕರಿಸುವ ಒಕ್ಕೂಟ ಸರ್ಕಾರವು ತನ್ನ ಅಧೀನ ಇಲಾಖೆಗಳು ಮತ್ತು ಸಂಸ್ಥೆಗಳಿಗೆ ನಡೆಸುತ್ತಿರುವ ನೇಮಕಾತಿ ಪರೀಕ್ಷೆಗಳಲ್ಲಿನ ತಾರತಮ್ಯದ ವ್ಯವಸ್ಥೆಗಳ ಬಗ್ಗೆ ಎಚ್ಚರ ಮೂಡುತ್ತಿದೆ.

ರೈಲ್ವೇ ನೇಮಕಾತಿ, ಬ್ಯಾಂಕಿಂಗ್ ನೇಮಕಾತಿ, ಗ್ರಾಮೀಣ ಬ್ಯಾಂಕಿಂಗ್ ನೇಮಕಾತಿಗಳಲ್ಲಿ ಆಗುತ್ತಿದ್ದ ಅನ್ಯಾಯಗಳನ್ನು ಪ್ರಶ್ನಿಸುವ, ಕೆಲವೊಂದರ ಬದಲಾವಣೆಗೆ ಕಾರಣವಾಗುವ ನಿಟ್ಟಿನಲ್ಲಿ ಕನ್ನಡ ಚಳವಳಿ ಯಶಸ್ವಿಯಾಗಿದೆ.

ಕೇಂದ್ರೀಯ ಲೋಕಸೇವಾ ಆಯೋಗದ ಪರೀಕ್ಷೆಗಳನ್ನು ಕೇವಲ ಹಿಂದಿ ಮತ್ತು ಇಂಗ್ಲಿಷ್‌ಗಳಲ್ಲಿ ನಡೆಸುವ ಮೂಲಕ ಹೇಗೆ ಹಿಂದಿ ತಾಯ್ನುಡಿಯವರಿಗೆ ಅನುಕೂಲ ಮಾಡಿಕೊಡಲಾಗುತ್ತಿದೆ ಎನ್ನುವುದರ ಅರಿವು